ಧೈರ್ಯವಾಗಲಿಲ್ಲ. ಒಬ್ಬ ಹೆಂಗಸು ಇವನ ಮುಖವನ್ನು ತನ್ನ ಸೆರಗಿನಿಂದ ಮುಚ್ಚಿ 'ಭಿಕಾರಿ ಆಗಿಹೋದಲ್ಲೋ ಮಗು' ಎಂದದ್ದು ಮಾತ್ರ ಇವನಿಗೆ ಜ್ಞಾಪಕ.

ಬವಳಿ ಬಂದು ಬಿದ್ದ ಅವನನ್ನು ಒಬ್ಬ ಗೃಹಸ್ಥರು ಮನೆಯಲ್ಲಿರಿಸಿಕೊಂಡು ಶೈತ್ಯೋಪಚಾರ ಮಾಡಿದರು. ಅವನನ್ನು ನೋಡಿಕೊಳ್ಳಲು ಜನ ಗೊತ್ತು ಮಾಡಿ ಅವನ ತಾಯಿಯ ಅಂತಿಮ ವಿಧಿಗಳನ್ನು ಊರ ಜನವೇ ಮಾಡಿ ಪೂರೈಸಿದರು. ಮುಂದಿನ ಅವನ ಜೀವನ ಮುಳ್ಳಿನ ಮೇಲಿನ ನಡಿಗೆಯಂತಿತ್ತು.

ಅಲ್ಲಿ ಇಲ್ಲಿ ದಿನಸಿ ಅಂಗಡಿಗಳಲ್ಲಿ ಕೆಲಸ ಮಾಡುವುದು, ಲೆಕ್ಕಗಳನ್ನು ಬರೆಯುವುದು, ಪತ್ರಿಕೆ, ಹಾಲು ಹಾಕುವ ಕೆಲಸ. ಹೀಗೆ ನಾನಾ ಕಸರತ್ತು ಮಾಡಿ ಸರ್ಕಾರಿ ಹಾಸ್ಟೆಲ್ಲುಗಳಲ್ಲಿ ಸೀಟು ದೊರಕಿಸಿಕೊಂಡು, ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿ ಇಂಗ್ಲಿಷ್‌ನಲ್ಲಿ ಎಂ.ಎ. ಡಿಗ್ರಿ ಸಂಪಾದಿಸಿದ. ಅನಂತರದ ದಿನಗಳಲ್ಲಿ ಒಂದೆರಡು ಖಾಸಗಿ ಕಾಲೇಜುಗಳಲ್ಲಿ ಪಾಠ ಹೇಳಿದ. ಸಂಜೆಗಳನ್ನು ಟ್ಯುಟೋರಿಯಲ್‌ಗಳಿಗೆ ಬಳಸಿದ. ಎಲ್ಲೂ ಗಟ್ಟಿಯಾದ ನೌಕರಿ ಸಿಗದೆ ಅಂತರ ಪಿಶಾಚಿಯಂತೆ ಅಲೆದಾಡುತ್ತಿದ್ದ.

ಒಮ್ಮೆ ಅವಕಾಶ ಕೇಳಿಕೊಂಡು 'ಜ್ಞಾನಯಜ್ಞ' ಕಾಲೇಜಿಗೆ ಹೋದ ಶಿವಶಂಕರನಿಗೆ ಅಲ್ಲಿನ ಮುಖ್ಯ ಗುಮಾಸ್ತೆ ಪದ್ದಣ್ಣ ಪರಿಚಯನಾದ. 'ನಿನಗೆ ನೌಕರಿ ಆಗುತ್ತೆ, ಚಿಂತೆ ಬೇಡ' ಎಂದೇ ಅವರು ಭರವಸೆ ನೀಡಿದ್ದರು. ಪದ್ದಣ್ಣನಿಗೆ ಆ ಕಾಲೇಜಿನಲ್ಲಿ ಒಳ್ಳೆಯ ಹೆಸರಿತ್ತು. ಅವರು ಮನಸು ಮಾಡಿದರೆ ಕಾಯಂ ಕೆಲಸವೇ ಕೊಡಿಸಬಲ್ಲಷ್ಟು ಶಕ್ತಿವಂತರಾಗಿದ್ದರು. ಶಿವಶಂಕರನಿಗೂ ಇದು ಗೊತ್ತಾಗದಿರಲಿಲ್ಲ.

ಎರಡು ಮೂರು ಸರ್ತಿ ಅವರಲ್ಲಿಗೆ ಶಿವಶಂಕರನ ಸವಾರಿ ಹೋಗಿ ಬಂತು. ಅವರು ಮ್ಯಾನೇಜ್ಮೆಂಟ್‌ನಲ್ಲಿ ಅದು ನಿರ್ಣಯ ಆಗಬೇಕು. ವಿಳಾಸ ಉಂಟಲ್ಲ, ಕಾಗದ ಬರಿತೀನಿ ಅಂದರು. ಇವನು ದಿನಾ ಅಂಚೆಯವನನ್ನು ನಿರೀಕ್ಷಿಸಿ ನಿರೀಕ್ಷಿಸಿ ಬೇಸತ್ತು ನೇರ ಕಚೇರಿಗೆ ಹೋಗಿ ಕೇಳುತ್ತಿದ್ದ. ಒಂದು ಗುರುವಾರ ಸಂಜೆಯ ಸಮಯಕ್ಕೆ ಪದ್ದಣ್ಣನವರೇ ಇವನಿರುವಲ್ಲಿಗೆ ಹುಡುಕಿ ಬಂದರು. ಇವನು ದಡಬಡ ಎಂದು ಓಡಾಡಿದ. 'ಏನೂ ತೊಂದರೆ ತಗೋಬೇಡಿ. ಕಾಗದ ಬರೆದಿದ್ದೆ; ತಲುಪಿಲ್ಲ ಅನಿಸಿತು. ಇರಲಿ ಎಂದು ನಾನೇ ಒಂದೆಜ್ಜೆ ಬಂದೆ' ಎಂದು ನೆಲದಲ್ಲಿಯೇ ಉಸ್ಸಪ್ಪಾ ಎಂದು ಕೂತುಬಿಡುವುದೆ.

ಶಿವಶಂಕರನಿಗೆ ಕೋಣೆಯಲ್ಲಿ ಒಂದು ಕುರ್ಚಿಗೂ ಗತಿಯಿಲ್ಲವಲ್ಲ ಎಂದು ಯಾತನೆಯಾಯಿತು. ಈ ನೋವಿನ ಭಾವ ಗ್ರಹಿಸಿದ ಪದ್ದಣ್ಣ 'ಬನ್ನಿ, ಹೊರಗಡೆ ಎಲ್ಲಿಯಾದರೂ ಕಾಫಿ ಕುಡಿಯೋಣ' ಎಂದು ಎದ್ದುಬಿಟ್ಟರು. ಹೋದ ಉಸಿರು ಬಂದಂತಾಗಿ ಶಿವಶಂಕರ ಅವರ ಹಿಂದೆ ಬಾಗಿಲಿಕ್ಕಿಕೊಂಡು ನಡೆದ.

ತಗಡೂರು ರಾಮಚಂದ್ರರಾಯ ಸರ್ಕಲ್ಲಿನಲ್ಲಿರುವ 'ನಿಸರ್ಗ ಕಾಫಿ ಕೆಫೆ' ಸಂಜೆಯ ಕಾಫಿಗೆ ತುಂಬಾ ಪ್ರಸಿದ್ಧಿ. ಜನ ಕಾಫಿ ಹೀರುತ್ತ ಹರಟಲು, ಗಂಭೀರವಾಗಿ ಚರ್ಚಿಸಲು, ವ್ಯವಹಾರಗಳನ್ನು ಚುಕ್ತಾ ಮಾಡಿಕೊಳ್ಳಲು ಈ ಕೆಫೆಗೆ ಬರುವುದುಂಟು. ತಣ್ಣನೆಯ ಗಾಳಿ ಬರುವ ಜನ್ನಲಿನ ಬದಿಗೆ ಇಬ್ಬರೂ ಕೂತರು. ಐದು ಮಿನಿಟಿಗೆ ಕಾಫಿ ಬಂತು. ಗುಟುಕರಿಸುತ್ತಾ ಶಿವಶಂಕರ ಪದ್ದಣ್ಣನನ್ನು ಕೇಳಿಸಿಕೊಳ್ಳಲು ಉಪಕ್ರಮಿಸಿದ.

'ಇರುವ ಮೂವರು ಹೆಣ್ಣುಮಕ್ಕಳಲ್ಲಿ ಇಬ್ಬರು ಚೆನ್ನಾಗಿಯೇ ಸೆಟಲ್ ಆಗಿದ್ದಾರೆ. ಹಿರಿಯವಳು ಸುಮತಿ. ಉಳಿದ ಇಬ್ಬರಿಗಿಂತಲೂ ಲಕ್ಷಣವಾಗಿದ್ದಳು. ಅವಳಿಗೆ ಒಳ್ಳೆಯ ಕಡೆಯೇ ಹುಡುಕಿ ಕೊಟ್ಟಿದ್ದೆವು. ಅವಳ ಗ್ರಹಚಾರ ಎರಡು ವರ್ಷದಲ್ಲಿಯೇ ಗಂಡನನ್ನು ಕಳೆದುಕೊಂಡಳು. ಈಗ ಅವಳು ನಮ್ಮಲ್ಲಿಯೇ ಇದ್ದಾಳೆ. ಮಗಳಿಗೆ ಹೀಗಾಯ್ತಲ್ಲ ಎಂದು ಅವಳಮ್ಮ ಕೊರಗಿ ಕೊರಗಿ